ಶ್ರೀ ಬಿ. ಎಸ್. ಬಚ್ಚೇಗೌಡ : ಅಧ್ಯಕ್ಷರು, ಏನು ಹೇಳಿದ್ದಾರೆ, ಆ ಪ್ರಕಾರವೇ ಮಾಡೋಣ.

ಶ್ರೀ ಕೆ. ಎನ್. ಗದ್ದಿ : ಶಾಸಕರಾದವರಿಗೆ ಸಮಾರಂಭದ ಒಂದು ಆಹ್ವಾನ ಪತ್ರಿಕೆ ಕಳುಹಿಸದೆ ಕಾರ್ಯಕ್ರಮ ನಡೆಸುವವರು ಸಮಾರಂಭಕ್ಕೆ ನನ್ನನ್ನು ಕರೆಯುತ್ತಾರೆಯೇ ? ತಾವೇ ಹೇಳಿ.

ಶ್ರೀ ಎಸ್. ಎಸ್. ಪಾಟೀಲ್ : ತಮ್ಮ ಗಮನಕ್ಕೆ ತರುವುದಾದರೆ, ಶಿರಟ್ಟಿ ಎಂ. ಎಲ್. ಎ. ರವರನ್ನು ಬಿಟ್ಟು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮವನ್ನು ಹೆಚ್. ಕೆ. ಪಾಟೀಲರು ಮಾಡಿದರು. ಇವರುಗಳು ಅಲ್ಲಿಗೆ ಹೋಗಿಬಿಟ್ಟಿರುತ್ತಾರೆ ಆದರೆ ಜಿಲ್ಲಾಪಂಚಾಯಿತಿಯವರು ಕಾರ್ಯಕ್ರಮವನ್ನು ಮಾಡಿ ಬಿಟ್ಟಿರುತ್ತಾರೆ. ಇವರಿಗೆ ಅದು ಗೊತ್ತಿರುವುದೇ ಇಲ್ಲ. ಈ ರೀತಿಯಾಗುತ್ತದೆ. ಜಿಲ್ಲಾಪಂಚಾಯಿತಿಯ ಅಧ್ಯಕ್ಷರು ಅದನ್ನು ನಾನು ಮಾಡಬೇಕು ಎಂದು ಅವರೇ ಮಾಡಿಬಿಟ್ಟಿದ್ದರು. ಈ ರೀತಿಯಾಗುತ್ತದೆ ಹೊರತು ಉದ್ದೇಶಪೂರ್ವಕವಾಗಿ ಯಾರು ಮಾಡುವುದಿಲ್ಲ.

ಅಧ್ಯಕ್ಷರು : ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುತ್ತಾರೆ, ತಮ್ಮದೆ ಅಧ್ಯಕ್ಷತೆಯೆಂದು ಹೇಳಿರುತ್ತಾರೆ, ಕಾರ್ಯಕ್ರಮವನ್ನು ಮುಂದು ಹಾಕುವುದು ಬೇಡ, ತಮ್ಮ ಅಧ್ಯಕ್ಷತೆಯಲ್ಲೇ ಕಾರ್ಯಕ್ರಮ ನಡೆಸುತ್ತಾರೆ. ದಯಮಾಡಿ ಸಹಕರಿಸಿ.

(ಐ) ಕಳೆದ ಅಕ್ಟೋಬರ್ ತಿಂಗಳಲ್ಲಿ ಶಾಸಕರ ಮನೆಯ ಮೇಲೆ ಗುಂಡಿನ ದಾಳಿ ನಡೆಸಿರುವುದು.

ಶ್ರೀ ಡಿ. ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಅಧ್ಯಕ್ಷರೆ, ಕಳೆದ ಅಕ್ಟೋಬರ್ ತಿಂಗಳ ಅಧಿವೇಶನದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ತಮ್ಮ ಮೂಲಕ ಮಾನ್ಯ ಗೃಹಸಚಿವರಲ್ಲಿ ಅದೇ ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತಿದ್ದೇನೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ನನ್ನ ಮನೆಯ ಮೇಲೆ ಗುಂಡಿನ ದಾಳಿ ನಡೆದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಅಧಿವೇಶನ ಪ್ರಾರಂಭವಾದ ಮೇಲೆ ಇದರ ಬಗ್ಗೆ ಗಮನಸೆಳೆಯುವ ಸೂಚನೆಯ ಮೂಲಕ ಸರ್ಕಾರದ ಗಮನಕ್ಕೆ ತಂದೆ, ಈಗ ಕೊನೆಯದಾಗಿ ಶೂನ್ಯವೇಳೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ನನ್ನ ಜಿಲ್ಲೆಯಲ್ಲಿರುವ ಪೋಲಿಸ್ ಅಧಿಕಾರಿ ನಮ್ಮನ್ನು ನೋಡಿ ನಗುತ್ತಿದ್ದಾನೆ. ಕೊಡಗು ಜಿಲ್ಲೆಯ ಪೋಲಿಸ್ ವರಿಷ್ಟಾಧಿಕಾರಿ ಸರ್ಕಾರದ ಅನುಮತಿ ಇಲ್ಲದೆ ಸಾರ್ವಜನಿಕರಿಂದ ಪೋಲಿಸ್ ಕಲ್ಯಾಣ ಮಂಟಪ ಕಟ್ಟಲು ಹಣವನ್ನು ಸಂಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅಕ್ರಮ ಸಾರಾಯಿ ವಿರುದ್ಧ ಹೋರಾಟ ಮಾಡಿದ ನಿರಪರಾಧಿ ಮಹಿಳೆಯರ ಮೇಲೆ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಲ್ಲದೆ ಸತ್ತವರ ಮೇಲು ಮೊಕದ್ದಮೆಗಳನ್ನು ಹೂಡಿರುತ್ತಾರೆ. ಇದರ ಜೊತೆಗೆ ಮಡಿಕೇರಿಯ ನನ್ನ ಮನೆಯ ಮೇಲಾದ ಗುಂಡಿನ ದಾಳಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಕಳೆದ ಐದು ತಿಂಗಳ ಹಿಂದೆ ಇದರ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಸಿ.ಒ.ಡಿ. ತನಿಖೆ ಮಾಡಬೇಕೆಂದು ನಾನು ಕೇಳಿರಲಿಲ್ಲ. ಆದರೆ ಗೃಹ ಕಾರ್ಯದರ್ಶಿಯವರನ್ನು ನನ್ನ ಜಿಲ್ಲೆಗೆ ಕಳಿಸಿಕೊಟ್ಟು ಅಲ್ಲಿ ಪೋಲೀಸ್ ಇಲಾಖೆಯಿಂದ ಆಗುತ್ತಿರುವ ಅಕ್ರಮಗಳ ಬಗ್ಗೆ ಪರಿಶೀಲನೆ ಮಾಡಲು ಕೇಳಿಕೊಂಡಿದ್ದೆ . ಆದರೆ ಸದನದಲ್ಲಿ ಆ ವಿಚಾರದ ಬಗ್ಗೆ ಸಿ. ಓ. ಡಿ. ತನಿಖೆ ಮಾಡಲು ಒಪ್ಪಿಸಿದರು. ಐದು ತಿಂಗಳುಗಳಾದರು ಸಿ. ಓ.ಡಿ. ತನಿಖೆ ಏನಾಗಿದೆ

ಎಂಬುದು ಗೊತ್ತಿಲ್ಲ. ನನ್ನ ಮನೆಯ ಮೇಲೆ ಯಾರು ದಾಳಿ ಮಾಡಿದರು ಎಂಬುದು ಇಡೀ ಜಿಲ್ಲೆಯ ಜನರಿಗೆ ಗೊತ್ತಿದೆ. ಆದರೆ ಪೋಲಿಸ್‌ನವರಾಗಲಿ, ಸಿ.ಓ.ಡಿ. ಯವರಾಗಲಿ ಅವರನ್ನು ಬಂಧಿಸುತ್ತಿಲ್ಲ. ಆದ್ದರಿಂದ, ನಾನು ಬಹಳ ನೊಂದು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅಲ್ಲಿನ ಪೋಲಿಸ್ ವರಿಷ್ಠಾಧಿಕಾರಿಯವರು ಅಕ್ರಮ ಚಟುವಟಿಕೆಗಳನ್ನು ಮಾಡುವವರೊಂದಿಗೆ ಶಾಮೀಲಾಗಿದ್ದಾರೆ. ಎಷ್ಟೋ ಕೊಲೆ ಪ್ರಕರಣಗಳನ್ನು ಪತ್ತೆ ಮಾಡಲು ಪೋಲಿಸ್ ಇಲಾಖೆಯವರಿಂದ ಆಗುತ್ತಿಲ್ಲ. ಇದರ ಬಗ್ಗೆ ಗೃಹ ಸಚಿವರು ನನಗೆ ರಕ್ಷಣೆಯನ್ನು ಕೊಡಬೇಕು ಮತ್ತು ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕೊಡಗಿನ ಪೋಲಿಸ್‌ನವರು ಸರ್ಕಾರದ ಅನುಮತಿ ಇಲ್ಲದೆ ಕಲ್ಯಾಣ ಮಂಟಪವನ್ನು ಕಟ್ಟಿದ್ದಾರೆ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು ಈ ವಿಚಾರವನ್ನು ನನಗೆ ತಿಳಿಸಿದ ಮೇಲೆ ನಾನು ಕೊಡಗು ವರಿಷ್ಠ ಪೋಲಿಸ್ ಅಧಿಕಾರಿಗಳ ಜೊತೆ ಮಾತನಾಡಿದಾಗ, ಅವರು ಡಿ. ಜಿ. ಪಿ. ಯವರ ಗಮನಕ್ಕೆ ಇದನ್ನು ತಂದು ಕಟ್ಟಿಸಿದ್ದಾರೆ. ತಮಗೆ ಗೊತ್ತಿರುವ ಹಾಗೆ ಪೋಲೀಸ್ ವೆಲ್‌ಫೇರ್ ಫಂಡ್ ಮತ್ತು ಬೆನವಲೆಂಟ್ ಫಂಡ್ ಎಂದು ವಸೂಲು ಮಾಡಿ ಎಲ್ಲಾ ಕಡೆ ಕಲ್ಯಾಣ ಮಂಟಪಗಳನ್ನು ಕಟ್ಟುವುದು ಸುಮಾರು ಐವತ್ತು ವರ್ಷಗಳಿಂದ ವಾಡಿಕೆಯಲ್ಲಿದೆ. ಈ ತಿಂಗಳ 19ನೇ ತಾರೀಖು ಜಿಲ್ಲಾ ಮಂತ್ರಿಗಳು ಅದನ್ನು ಉದ್ಘಾಟನೆ ಮಾಡುತ್ತಿದ್ದಾರೆ. ಅದರ ಲೆಕ್ಕಪತ್ರಗಳಲ್ಲಿ ಏನಾದರೂ ತಪ್ಪಾಗಿದ್ದರೆ ಅದನ್ನು ಪರಿಶೀಲನೆ ಮಾಡಿಸುತ್ತೇನೆ. ಸಾರಾಯಿ ಮಾರಾಟದ ವಿರುದ್ಧ ಪ್ರತಿಭಟನೆ ಮಾಡಿದ ಮಹಿಳೆಯರ ವಿರುದ್ಧ ಅಕ್ರಮವಾಗಿ ಕೇಸುಗಳನ್ನು ಹಾಕಿದ್ದಾರೆ, ಕಳ್ಳಭಟ್ಟಿ ಮಾರಾಟಗಾರರ ಪರವಾಗಿ ಪೋಲಿಸ್‌ನವರು ವರ್ತಿಸುತ್ತಿದ್ದಾರೆಂದು ಹೇಳಿದ್ದಾರೆ. ಈ ತಿಂಗಳ 10ರ ನಂತರ ನಾನು ಪ್ರತಿಯೊಂದು ಜಿಲ್ಲೆಯಲ್ಲೂ ಪ್ರವಾಸ ಮಾಡುತ್ತಿದ್ದೇನೆ. ಆ ಸಂದರ್ಭದಲ್ಲಿ ಇವರು ಹೇಳಿರುವ ವಿಚಾರಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇನ್ನು ಮೂರನೆ ವಿಚಾರ ಬಹಳ ಸೂಕ್ಷ್ಮವಾದ ವಿಚಾರ. ಅದರ ವಿವರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಯಾವುದೇ ಗೌರವಾನ್ವಿತ ಸದಸ್ಯರು ಸಕ್ರಮವಾಗಿ ಮಾಡತಕ್ಕ ಎಲ್ಲ ಚಟುವಟಿಕೆಗಳಿಗೆ ಮತ್ತು ಸದನದ ಸದಸ್ಯರಾಗಿ ಜನಪ್ರತಿನಿಧಿಯಾಗಿ ಮಾಡತಕ್ಕ ಎಲ್ಲ ಕೆಲಸಗಳಿಗೆ ಈ ಸರ್ಕಾರದ ರಕ್ಷಣೆ ಇರುತ್ತದೆ. ನಾನು ಎಲ್ಲಿಯವರೆಗೆ ಗೃಹ ಸಚಿವನಾಗಿರುತ್ತೇನೆ ಅಲ್ಲಿಯವರೆಗೆ ರಕ್ಷಣೆಯನ್ನು ಕೊಡಲು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ. ಪೋಲಿಸ್ ವರಿಷ್ಠಾಧಿಕಾರಿ ಎಷ್ಟೇ ದೊಡ್ಡವರಾಗಿರಲಿ ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಎಸ್. ಮಾದಪ್ಪ : ಮಾನ್ಯ ಅಧ್ಯಕ್ಷರೆ, ಅಕ್ರಮ ಮಾಡುತ್ತಿರುವವರ ವಿರುದ್ಧ ಯಾವ ಮಹಿಳೆಯರು ಹೋರಾಟ ಮಾಡಿದ್ದಾರೆ ಅವರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಮತ್ತು ಸತ್ತವರ ಮೇಲೆ ಮೊಕದ್ದಮೆಗಳನ್ನು ಹಾಕಿದ್ದಾರೆ. ಅದು ನಿಜವಾಗಿದ್ದರೆ ಆ ಪೋಲಿಸ್ ವರಿಷ್ಠಾಧಿಕಾರಿಗೆ ಯಾವ ಶಿಕ್ಷೆಯನ್ನು ಕೊಡುತ್ತೀರಿ ಎಂಬುದನ್ನು ಈ ಸದನದಲ್ಲಿ ಹೇಳಬೇಕು.

ಅಧ್ಯಕ್ಷರು : ನಾನು ಪ್ರತಿ ಜಿಲ್ಲೆಗಳಿಗೆ ಭೇಟಿ ಕೊಡುತ್ತೇನೆ, ಆ ರೀತಿ ಹೋದಾಗ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಗೃಹ ಸಚಿವರು ಹೇಳಿದ್ದಾರೆ. ಒಂದು ವೇಳೆ ಅಧಿಕಾರಿಗಳು ತಪ್ಪು

ಮಾಡಿದಾಗ ಅವರು ಎಷ್ಟೇ ದೊಡ್ಡ ಅಧಿಕಾರಿಗಳಾಗಿದ್ದರು ಕ್ರಮ ತೆಗೆದು ಕೊಳ್ಳಲು ಹಿಂಜರಿಯುವು ದಿಲ್ಲವೆಂದು ಹೇಳಿದ್ದಾರೆ. ಗೃಹ ಸಚಿವರು ಕೊಡಗಿಗೆ ಬಂದಾಗ ಆ ವಿವರಗಳೆಲ್ಲವನ್ನು ಕೊಡಿ.

ಶ್ರೀ ಡಿ. ಎಸ್. ಮಾದಪ್ಪ : ಇದೇ ರೀತಿ ವೀರಾಜಪೇಟೆಯಲ್ಲಿ ಜೋಡಿ ಕೊಲೆ ಏನು ನಡೆಯಿತು ಅಲ್ಲಿಯೂ ಮುಗ್ಧರ ಮೇಲೆ ಸತ್ತವರ ಮೇಲೆ ಕೊಲೆ ಮೊಕದ್ದಮೆಯನ್ನು ಹಾಕಿದ್ದಾರೆ.

ಅಧ್ಯಕ್ಷರು : ಗೃಹ ಸಚಿವರು ಅಲ್ಲಿಗೆ ಬಂದಾಗ ಎಲ್ಲ ವಿಚಾರವನ್ನು ಅವರ ಗಮನಕ್ಕೆ ತನ್ನಿ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಕಲ್ಯಾಣ ಮಂಟಪದ ವಿಚಾರವನ್ನು ಪ್ರಸ್ತಾಪ ಮಾಡಿದರು. ಆ ರೀತಿ ಕಲ್ಯಾಣ ಮಂಟಪವನ್ನು ಮಾಡುವ ಸಂದರ್ಭದಲ್ಲಿ ಅಕ್ರಮವಾಗಿ ಮತ್ತು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ವಂತಿಕೆ, ಇತರೆ ಸಾಮಗ್ರಿಗಳನ್ನು ವಸೂಲಿ ಮಾಡುತ್ತಿರುವುದು ನನ್ನ ಗಮನಕ್ಕೆ ಬಂತು. ಆ ರೀತಿ ವಸೂಲಿ ಮಾಡಿ ಕಲ್ಯಾಣ ಮಂಟಪ ಕಟ್ಟುತಕ್ಕ ಸಂದರ್ಭ ಇವತ್ತು ಬಂದಿಲ್ಲ. ಅವರು ಅಧಿಕಾರದ ದುರುಪಯೋಗ ಮಾಡಿದ್ದಾರೆ. ಅದಕ್ಕೆ ಪುರಾವೆಯೇನಾದರು ಬೇಕಾಗಿದ್ದರೆ ಈ ಸದನದ ಮೂಲಕ ಒದಗಿಸಲು ನಾನು ಸಿದ್ಧನಾಗಿರುವೆ. ದಯವಿಟ್ಟು ಆ ಅಧಿಕಾರಿಯ ಮೇಲೆ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಮಾದಪ್ಪನವರು ಮತ್ತು ಬಸವರಾಜ್‌ರವರು ಕೊಡಗು ಜಿಲ್ಲೆಯ ಪೋಲಿಸರ ಬಗ್ಗೆ ಹೇಳಿರುವ ವಿಚಾರಗಳು ಸೂಕ್ಷ್ಮವಾಗಿವೆ. ಕೊಡಗು ಜಿಲ್ಲೆಯ ಕಾನೂನಿಗೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳು ಇದೆ. ತಾವು ಹೇಳಿರುವ ವಿಚಾರಗಳಲ್ಲಿ ಅನೇಕ ವಿಚಾರಗಳು ಸೂಕ್ಷ್ಮತೆಯನ್ನು ಹೊಂದಿವೆ. ಬೇಕಾದರೆ ಅದನ್ನು ತಮ್ಮಗಮನಕ್ಕೆ ಪ್ರತ್ಯೇಕವಾಗಿ ತರುತ್ತೇನೆ. ನಾನು ಯಾವುದೇ ಅಧಿಕಾರಿಗೂ ರಕ್ಷಣೆ ಮಾಡಲು ಹೋಗುವುದಿಲ್ಲ.

ಶ್ರೀ ಡಿ. ಎಸ್. ಮಾದಪ್ಪ : ನನ್ನ ಮನೆ ಮೇಲೆ ನಡೆದ ದಾಳಿಯ ಬಗ್ಗೆ ಸಿ. ಒ. ಡಿ. ತನಿಖೆ ನೇಮಕ ಮಾಡಿ ಐದು ತಿಂಗಳುಗಳಾಯಿತು. ಅದರ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ : ನನ್ನ ಮನೆಯ ಮೇಲೆ ಗುಂಡು ಹಾರಿಸಿರುವವರನ್ನು ಅರೆಸ್ಟ್ ಮಾಡಿಲ್ಲವೆಂದು ಸದಸ್ಯರು ಹೇಳಿದ್ದಾರೆ. ಆದರೆ ಅದು ಸರಿಯಲ್ಲ. ಯಾರು ಗುಂಡನ್ನು ಹಾರಿಸಿದ್ದಾರೆ ಅವರಲ್ಲಿ ಕೆಲವರನ್ನು ಈಗಾಗಲೇ ಅರೆಸ್ಟ್ ಮಾಡಿ ಕ್ರಮ ತೆಗೆದುಕೊಂಡಿದ್ದಾರೆ. ಸಿ. ಒ. ಡಿ. ಯು ಡಿ. ಜಿ. ಪಿ. ಮತ್ತು ಅಧಿಕಾರಿಗಳಿಗೆ ಇದರ ಬಗ್ಗೆ ಕರೆದು ಸ್ವತಃ ಸೂಚನೆ ಕೊಟ್ಟಿದ್ದೇನೆ. ಆದಷ್ಟು ಬೇಗ ಇಂಥ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಎಕ್ಸ್‌ಪಿಡಿಯೇಟ್ ಮಾಡಬೇಕೆಂದು ಹೇಳಬಹುದೆ ಹೊರತು ಮೆರಿಟ್ ಆಫ್ ದಿ ಕೇಸ್‌ನಲ್ಲಿ ಗೃಹ ಸಚಿವನಾಗಿ ನಾನು ಮಧ್ಯ ಪ್ರವೇಶ ಮಾಡಲು ಅವಕಾಶವಿಲ್ಲ. Let us leave it at that stage..

(ಒ) ಕರಾವಳಿ ಮೀನುಗಾರರ ಯಾಂತ್ರೀಕೃತ ದೋಣಿಗಳ ಡೀಸಲ್‌ಗೆ ತೆರಿಗೆ ವಿನಾಯಿತಿ.

ಶ್ರೀ ಎನ್ ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, 1999-2000ರ ಬಜೆಟ್‌ನಲ್ಲಿ ಕರಾವಳಿ ಮೀನುಗಾರರ ಯಾಂತ್ರೀಕೃತ ದೋಣಿಗಳಿಗೆ ಉಪಯೋಗ ಮಾಡುವ ಡೀಸೆಲ್‌ಗೆ ತೆರಿಗೆ ವಿನಾಯಿತಿಯ ಬಗ್ಗೆ ಘೋಷಣೆ ಮಾಡಲಾಗಿತ್ತು. ಆದರೆ ನಿನ್ನೆಯ ಪತ್ರಿಕೆಯಲ್ಲಿ ಕೇವಲ ಮೂವತ್ತು